


ಪಾಲಿನೇಷಿಯನ್ನರು ದಶಕಗಳ ಕಾಲ ವಲಸೆ ನಡೆಸಿ ಅಲ್ಲಲ್ಲಿ ನೆಲೆಯಾದರು. ವಿವಿಧ ಹಂತದಲ್ಲಿ ವಲಸೆ ಬಂದವರು ಭಿನ್ನ ಒಳಗುಂಪುಗಳ ಸೃಷ್ಟಿಗೆ ಕಾರಣರಾದರು. ಮೂರ್ನಾಲ್ಕು ಶತಮಾನಗಳ ಬಳಿಕ 1642ರಲ್ಲಿ ಡಚ್ ಸಂಶೋಧಕ ಏಬೆಲ್ ಟಾಸ್ಮನ್ ಸಮುದ್ರಯಾನ ಮಾಡುತ್ತ ಈ ದ್ವೀಪಗಳ ಇರವು ಪತ್ತೆ ಹಚ್ಚಿದ. ನಂತರ 1768ರಲ್ಲಿ ಬ್ರಿಟನ್ನಿನ ಅನ್ವೇಷಕ ಕ್ಯಾಪ್ಟನ್ ಜೇಮ್ಸ್ ಕುಕ್ ಆ ನೆಲದಲ್ಲಿಳಿದು, ಕೆಲಕಾಲ ನಿಂತು, ಸಮುದ್ರದ ದಂಡೆಗುಂಟ ಚಲಿಸಿ ದ್ವೀಪಗಳ ಭೂಪಟ ತಯಾರಿಸಿದ.

ಯೂರೋಪಿಯನ್ನರ ಬಂದುಹೋಗುವಿಕೆ ಮುಂದುವರೆದು ವ್ಯಾಪಾರ, ವ್ಯವಹಾರ ಏರುಗತಿಯಲ್ಲಿ ಬೆಳೆಯಿತು. ಒಳಿತು ಮತ್ತು ಕೇಡುಗಳು ಜೊತೆಜೊತೆಯಾಗಿ ಬಂದವು. ಹೊರಗಿನಿಂದ ಬಂದ ಆಲೂಗೆಡ್ಡೆ ಬಲು ಜನಪ್ರಿಯವಾಯಿತು. ವಿಪುಲವಾಗಿ ಬೆಳೆದು ಆಹಾರ ಸಮೃದ್ಧಿ ತಂದಿತು. ಮತ್ತೊಂದೆಡೆ ಯೂರೋಪಿಯನ್ ವ್ಯಾಪಾರಿಗಳು ಪೂರೈಸಿದ ಬಂದೂಕುಗಳು (ಮಸ್ಕೆಟ್) ಕೇವಲ 40 ವರ್ಷಗಳಲ್ಲಿ (1800–1840) ಸಾವಿರಾರು ಅಂತರ್ಯುದ್ಧಗಳಿಗೆ ಕಾರಣವಾಗಿ 30–40 ಸಾವಿರ ಮಾವೊರಿಗಳು ಹತರಾಗಲು ಕಾರಣವಾಯಿತು. 1840ರಲ್ಲಿ ಬ್ರಿಟನ್ ಸಾಮ್ರಾಜ್ಯಶಾಹಿಯು ಸ್ಥಳೀಯ ಮಾವೋರಿ ನಾಯಕನೊಡನೆ ವೈತಂಗಿ ಒಪ್ಪಂದ ಮಾಡಿಕೊಂಡಿತು. ಮರುವರ್ಷವೇ ನ್ಯೂಜಿಲೆಂಡ್ ತನ್ನ ವಸಾಹತುವೆಂದು ಬ್ರಿಟನ್ ಘೋಷಿಸಿತು. ಇವತ್ತಿಗೂ ಅಲ್ಲಿನ ಮೂಲನಿವಾಸಿಗಳಿಗೂ, ಈ ಎರಡು ಶತಮಾನಗಳಲ್ಲಿ ವಲಸೆ ಹೋಗಿ ನೆಲೆಯಾಗಿ ಸಂಪನ್ಮೂಲಗಳ ಮೇಲೆ ಹಿಡಿತ ಸಾಧಿಸಿರುವ ಯೂರೋಪಿಯನ್ನರಿಗೂ ನಡುವೆ ಸಂಘರ್ಷ ನಡೆಯುತ್ತಲೇ ಇದೆ. ತಮ್ಮ ನೆಲದಲ್ಲೇ ಮೂಲನಿವಾಸಿಗಳು ಅಲ್ಪಸಂಖ್ಯಾತರಾಗಿದ್ದಾರೆ. ಬಹುಸಂಖ್ಯಾತ ಯೂರೋಪಿಯನ್ ಮೂಲದ ನ್ಯೂಜಿಲೆಂಡಿಗರು ಈಗಲೂ ಬ್ರಿಟನ್ನಿನ ರಾಜರಾಣಿಯರನ್ನು ತಮ್ಮ ಪರಮೋಚ್ಛ ಆಳ್ವಿಕರೆಂದೇ ಭಾವಿಸಿದ್ದಾರೆ.


## ವೈಟಮೊ ಗುಹಾಲೋಕ

ಮೂರು ಕೋಟಿ ವರುಷ ಕೆಳಗೆ ರೂಪುಗೊಂಡ ವೈಟಮೊ ಗುಹೆಗಳ ಆಧಿಪತ್ಯಕ್ಕೂ ಮಾವೋರಿಗಳು ಮತ್ತು ಬ್ರಿಟಿಷರ ನಡುವೆ ದೀರ್ಘ ಸಂಘರ್ಷ ನಡೆದ ಚರಿತ್ರೆಯಿದೆ.

ಗುಹೆಗಳನ್ನು ನೋಡಲೆಂದು ನಾವು ಆಕ್ಲೆಂಡಿನಿಂದ ಹೊರಟೆವು. ಟೂರಿಸ್ಟ್ ಬಸ್ಸುಗಳಲ್ಲಿ ನಮ್ಮನ್ನು ತುಂಬಿಕೊಂಡು ಮೂರು ತಾಸು ಪಯಣದ ಬಳಿಕ ಒಂದು ಪುಟ್ಟ ಗುಡ್ಡದ ಸೆರಗಿನಲ್ಲಿ ಇಳಿಸಿದರು. ಏಪ್ರಿಲ್ ತಿಂಗಳ ನಡುಹಗಲಾದರೇನು, ಸ್ವೆಟರು ಧರಿಸಿದ್ದೆವು. ಎತ್ತರದ ಮರಗಳಿಂದಾವೃತವಾದ ಪುಟ್ಟ ಗುಡ್ಡ. ಮರ ನೋಡಲು ಕತ್ತೆತ್ತಿದರೆ ನೀಲ ನಿರಭ್ರ ಆಗಸ.

ಆ ಪ್ರದೇಶದ ಮೂಲನಿವಾಸಿಗಳಾದ ಮಾವೋರಿ ಸಮುದಾಯದ ಒಂದು ಕುಟುಂಬದ ಸುಪರ್ದಿನಲ್ಲಿ ಭಾಗಶಃ ಇರುವ ವೈಟಮೊ ಗುಹೆಯ ಬಾಯಿಯ ತನಕ ನಡೆದುಹೋದೆವು. ಅಲ್ಲಿ ವ್ಯಕ್ತಿಯೊಬ್ಬ ಕೈಯಲ್ಲಿ ಬ್ಯಾಟರಿ ಹಿಡಿದು ಎದುರಾದ. ತನ್ನ ಹಿಂದೆ ನಾವು ಬರಬೇಕು ಎಂದ. ಅವನ ಕಂಚಿನ ಕಂಠ, ಸ್ಪಷ್ಟ ಉಚ್ಚಾರ, ಚಟುವಟಿಕೆಯಲ್ಲಿ ಚಲಿಸುವ ಆನೆಯಂತಹ ದೇಹವನ್ನು ಗಮನಿಸುತ್ತ ವಿವರಗಳ ಕೇಳುತ್ತ ನಡೆದೆವು. ಮುಟ್ಟುವುದು, ಮಾತನಾಡುವುದು, ಫೋಟೊ/ವಿಡಿಯೊ ತೆಗೆಯುವುದು ಮತ್ತು ಧೂಮಪಾನ– ಇವು ಸಂಪೂರ್ಣ ನಿಷಿದ್ಧ ಎಂದು ಹೇಳಿದ. ಮೂರು ಹಂತಗಳಲ್ಲಿರುವ ಒಂದೂವರೆ ಕಿಲೋಮೀಟರಿನಷ್ಟು ದೂರದ ಗುಹೆಯನ್ನು ಕ್ರಮಿಸತೊಡಗಿದೆವು.

ವೈ ಎಂದರೆ ನೀರು, ಟಮೊ ಎಂದರೆ ತೂತು. ವೈಟಮೊ ಎಂದರೆ ಜಲದ ಕಂಡಿ. ಅಲ್ಲಿ ವಾಸಿಸುತ್ತಿದ್ದ ಮಾವೋರಿ ಜನರಿಗೆ ಗುಹೆಗಳ ಇರುವಿಕೆಯ ಬಗೆಗೆ ಮೊದಲಿನಿಂದ ಗೊತ್ತಿತ್ತು. ಆದರೆ ಒಳಹೊಕ್ಕಿರಲಿಲ್ಲ. ನ್ಯೂಜಿಲೆಂಡನ್ನು ವಸಾಹತುವನ್ನಾಗಿಸಿಕೊಂಡಿದ್ದ ಬ್ರಿಟಿಷ್ ಅರಸೊತ್ತಿಗೆಯ ಅಧಿಕಾರಿಗಳು ಆ ಪ್ರದೇಶವನ್ನು ಸರ್ವೇ ಮಾಡಲು 1883ರಲ್ಲಿ ಬಂದಾಗ ಸ್ಥಳೀಯ ಮಾವೋರಿ ಕುಲದ ನಾಯಕ ಟಾನೆ ಟಿನೊರಾವು ಮತ್ತು ಅವನ ಪತ್ನಿ ಹುಟಿ ತಮ್ಮ ಒಡೆತನದ ಜಾಗದಲ್ಲಿ ವೈಟಮೊ ನದಿ ಹರಿವಿನ ಪಾತ್ರದಲ್ಲಿ ಇರುವ ಗುಹೆಗಳ ಬಗೆಗೆ ತಿಳಿಸಿದರು. ಗುಹೆಯ ಒಳಹೊಕ್ಕ ಬ್ರಿಟಿಷ್ ಅಧಿಕಾರಿಗಳು ಅಚ್ಚರಿಗೊಂಡು ನಿಂತುಬಿಟ್ಟರು. ಯಾವ ಶಿಲ್ಪಿ ಕಡೆದು ನಿಲ್ಲಿಸಿದ ಶಿಲ್ಪಗಳೋ ಎನ್ನುವಂತೆ ವಿಸ್ಮಯಕರ ಸುಣ್ಣಕಲ್ಲಿನ ರಚನೆಗಳು ಅಲ್ಲಿದ್ದವು. ಒಂದು ಗುಹಾಭಾಗದ ಸೂರಂತೂ ಪುಟ್ಟ



ಬಂಡೆಗೆ ಜೋತುಬಿದ್ದ ಬೆಳಕಿನ ಹುಳಗಳ ಅಂಟಿನ ಎಳೆಗಳು